ಶ್ರೀ ಕೆ.ಎಂ ಕೃಷ್ಣಾರೆಡ್ಡಿ.—ವಿದ್ಯುತ್ ಹಾಗೂ ನೀರು ಸರಬರಾಜು ಆದ ತಕ್ಷಣ ಶೀಘ್ರವಾಗಿ ಮಾಡುತ್ತೇವೆಂದು ತಮಗೆ ಹಿಂದಿನ ಸಾಲಿನಲ್ಲೇ ಉತ್ತರವನ್ನು ಕೊಟ್ಟಿದ್ದೇವೆ. ವಿದ್ಯುತ್ ಹಾಗೂ ನೀರು ಸರಬರಾಜು ಆದ ತಕ್ಷಣ ಶೀಘ್ರವೇ ಅಲ್ಲ, ತಕ್ಷಣವೇ ಮಾಡುತ್ತೇವೆನ್ನುವ ಭರವಸೆ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಧ್ಯಕ್ಷರೇ...

ಅಧ್ಯಕ್ಷರು.—ಎರಡು ಅಥವಾ ಮೂರು ಉಪ ಪ್ರಶ್ನೆಗಳನ್ನು ತಾವು ಕೇಳಬಹುದು. ಈಗ ಮೂರು ಆಗಿದೆ. ಮತ್ತೊಂದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಏನು ಕೇಳುತ್ತಿದ್ದೇನೆಂದರೆ.....

ಅಧ್ಯಕ್ಷರು.—ತಮಗೆ ಬರೀ ಉತ್ತರ ಬೇಕಪ್ಪ. ಅದನ್ನು ಪಡೆಯಲು ೧-೨-೩ ಸಾರಿ ಅವಕಾಶ ಎಂದು ಇದೆ. ಕೊನೆಯ ಉಪಪ್ರಶ್ನೆ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸಮರ್ಪಕ ಉತ್ತರ ಇದ್ದರೆ ಕೇಳುವುದಿಲ್ಲ. ಕಳೆದ ೨ ವರ್ಷಗಳಿಂದ ನೀರು, ವಿದ್ಯುತ್ ಎಂದು ಹೇಳುತ್ತಿದ್ದೀರಿ. ಅಲ್ಲಿ ವಿದ್ಯುತ್ ಕಂಬ ಹೋಗಿದೆ. ಪಕ್ಕದಲ್ಲೇ ಬೋರ್ವೆಲ್ ಇದೆ. ನೀರು ಬೇಕಾದಷ್ಟು ಇದೆ. ಹಣವನ್ನು ಕಟ್ಟಿ ಬಹಳ ದಿನಗಳಾದವು. ತಾವು ಅಧಿಕಾರಿಗಳಿಗೆ ಆದೇಶ ಕೊಡಿ ಸ್ವಾಮಿ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ.—೨೬-೨-೮೧ರಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಪತಿಯಿಂದ ಶಿಕಾರಿಪುರ ತಾ. ತಡಗಣಿಯಲ್ಲಿ ೪ ಲಕ್ಷ ರೂಪಾಯಿಗಳನ್ನು ಬಿಲ್ಡಿಂಗ್ ಸೆಂಟರ್‌ಗಾಗಿ ಮಂಜೂರು ಮಾಡಲಾಯಿತು. ಹಾಗೂ ಕಟ್ಟಡದ ಕೆಲಸವನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿಕೊಡಲಾಯಿತು. ಇವಕ್ಕೆ ನೀರು, ವಿದ್ಯುತ್‌ನ್ನು ಒದಗಿಸಿಲ್ಲವೆಂದು ತಿಳಿದುಬಂದಿದೆ. ವಿದ್ಯುತ್ ಇಲಾಖೆಗೆ ಈ ಬಗ್ಗೆ ಸಂಪರ್ಕ ಮಾಡಿದ್ದಾರೆ. ವಿದ್ಯುತ್ ಕೊಟ್ಟ ತಕ್ಷಣ ಕೆಲಸ ಪ್ರಾರಂಭ ಮಾಡಲಾಗುವುದು. ವಿದ್ಯುತ್ ಹಾಗೂ ನೀರು ಇಲ್ಲದೇ ಕೆಲಸ ಪ್ರಾರಂಭಿಸಲು ಸಾಧ್ಯವಿಲ್ಲ.

ಶಹಾಬಾದ್ ಮತಕ್ಷೇತ್ರದಲ್ಲಿ ತಾಂಡಾಗಳಿಗೆ ವಿದ್ಯುತ್ ಪೂರೈಕೆ ಬಗ್ಗೆ

೮೭ (೨೩೮) ಶ್ರೀ ಕೆ.ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.—

ಅ) ಶಾಹಾಬಾದ್ ಮತ ಕ್ಷೇತ್ರಗಳಲ್ಲಿರುವ ತಾಂಡಾಗಳಿಗೆ ಇನ್ನೂ ವಿದ್ಯುತ್ ಪೂರೈಕೆ ಆಗಿಲ್ಲ ದಿರಲು ಕಾರಣಗಳೇನು?

ಆ) ಕಳೆದ ಅಧಿವೇಶನದಲ್ಲಿ ಇವುಗಳಿಗಾಗಿಯೇ ಒಂದು ಆರ್.ಇ.ಪಿ. ಯೋಜನೆ ಮಾಡಿ ವಿದ್ಯುತ್ ಪೂರೈಕೆ ಮಾಡುವುದಾಗಿ ಮಾನ್ಯ ಮಂತ್ರಿಗಳು ವಾಗ್ದಾನ ಮಾಡಿದ್ದು ಇನ್ನೂ ಕಾರ್ಯಗತವಾಗಿಲ್ಲ ದಿರಲು ಕಾರಣವೇನು?

ಇ) ತರಿ ತಾಂಡಾ ಕುನಸೂರು ತಾಂಡಾ ಮಣಜಗಿ ತಾಂಡಾಗಳಿಗೆ ಆದ್ಯತೆ ಮೇರೆಗೆ ವಿದ್ಯುತ್ ಪೂರೈಕೆ ಮಾಡಲಾಗುವುದೇ,

ಶ್ರೀ ಜೆ. ಹೆಚ್. ಪಟೀಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ೯ ತಾಂಡಾಗಳಿಗೆ ವಿದ್ಯುತ್ ಪೂರೈಸಿದೆ, ಉಳಿದ ೪೦ ತಾಂಡಾಗಳ ಬಗ್ಗೆ ಗ್ರಾಮೀಣ ವಿದ್ಯುತ್ ನಿಗಮ ನವದೆಹಲಿಯ ಆರ್ಥಿಕ ನೆರವಿನ ಮಂಜೂರಾತಿಯನ್ನು ನಿರೀಕ್ಷಿಸಲಾಗುತ್ತಿದೆ.

ಆ) ಆರ್.ಇ.ಪಿ. ಯಿಂದ ಮಂಜೂರಾತಿ ನಿರೀಕ್ಷಿಸಲಾಗುತ್ತಿದೆ.

ಇ) ಆರ್.ಇ.ಪಿ. ಯ ಮಂಜೂರಾತಿ ಬಂದ ಕೂಡಲೇ ಕೆಲಸ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಕೆ.ಬಿ. ಶಾಣಪ್ಪ.—ಅಧ್ಯಕ್ಷರೇ, ಈಗಾಗಲೇ ಮಾನ್ಯ ಎಸ್.ಕೆ. ಕಾಂತಾರವರು ಕೇಳಿದ್ದಕ್ಕೂ ಮಾನ್ಯ ಮಂತ್ರಿಗಳು ಇದೇ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ೯ ತಾಂಡಾಗಳಿಗೆ ವಿದ್ಯುತ್ ಪೂರೈಸಲಾಗಿದೆ ಎಂದಿದ್ದಾರೆ. ಇವಳ್ಳು ಈ ಜನರನ್ನೂ ಪರಿಶಿಷ್ಟ ಜಾತಿ ಎಂದು ಪರಿಗಣಿಸಿ

ಹರಿಜನರಿಗೆ ಕೊಡುವ ಸೌಲಭ್ಯಗಳನ್ನು ಇವರಿಗೂ ವಿಸ್ತರಿಸಬೇಕೆಂದು ಮಾಡಿದ್ದೀರಿ. ಹರಿಜನರಿಗೆ ಯಾವ ರೀತಿ ರಸ್ತೆ, ವಿದ್ಯುತ್ ಹಾಗೂ ಇತರ ಸೌಲಭ್ಯಗಳನ್ನು ಕೊಡುವಾಗ ಆದ್ಯತೆ ಕೊಡ ಬೇಕೆಂದು ಗುರಿ ಇಟ್ಟು ಕೊಂಡಿದ್ದೀರೋ ಅದೇ ಪ್ರಕಾರ ಈ ಜನಕ್ಕೂ ಆದ್ಯತೆ ಕೊಡಬೇಕು. ಇವತ್ತು ನಮ್ಮ ಕಡೆ ಅರ್ಧ ಕಿ.ಮೀ. ದೂರದಲ್ಲಿ ಇರುವ ತಾಂಡಾಗಳಿಗೂ ವಿದ್ಯುತ್ ಕೊಟ್ಟಿಲ್ಲ. ಒಂದೆರಡು ಕಂಬಗಳನ್ನು ಹಾಕಿದರೂ ಸುಮಾರು ೨೦–೨೫ ತಾಂಡಾಗಳಿಗೆ ವಿದ್ಯುತ್ ಒದಗಿಸಬಹು ದಾಗಿದೆ. ಇಂತಹ ಸ್ವಲ್ಪ ಖರ್ಚಿನಲ್ಲಿ ಆಗುವ ಕಡೆ ಶೀಘ್ರ ಕೆಲಸ ಮಾಡುತ್ತೀರಾ ?

ಶ್ರೀ ಜೆ.ಹೆಚ್. ಪಟೀಲ್.—ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ೨–೩ ಕಂಬಗಳಿಂದ ವಿದ್ಯುತ್ ದೊರೆಯುವುದಾದರೆ ಅಂತಹ ತಾಂಡಗಳ ಕೆಲಸ ಬೇಗ ಮುಗಿಯುತ್ತವೆ. ಆದರೆ ಎಷ್ಟು ಸುಲಭವಾಗಿ ಹರಿಜನ ಕೇರಿಗಳಿಗೆ ವಿದ್ಯುತ್ ಒದಗಲಾಗುವುದೋ ಅಷ್ಟೇ ಸುಲಭದಲ್ಲಿ ಇವುಗಳಿಗೆ ಒದಗಿಸಲಾಗುವುದಿಲ್ಲ. ಕೆಲವು ಸಾರಿ ಇವು ಇಂಟೀರಿಯರ್‌ನಲ್ಲಿ ಇರುತ್ತವೆ. ತಾಂಡಾಗಳು ತಮ್ಮದೇ ಆದ ಇತಿಹಾಸದ ಹಿನ್ನೆಲೆಯನ್ನು ಹೊಂದಿವೆ. ಆ ಕಾರಣದಿಂದ ಹರಿಜನ ಕಾಲೋನಿಗಳಿಗೆ ಕೊಡುವ ಆದ್ಯತೆಯನ್ನೇ ಇವರಿಗೆ ಕೊಟ್ಟಿದ್ದು ಅದಕ್ಕಾಗಿ ಆರ್.ಇ.ಸಿ. ಯವರ ಮಂಜೂರಾತಿಯನ್ನು ಕಾಯುತ್ತಿದ್ದೇವೆ.

ಶ್ರೀ ಕೆ.ಬಿ. ಶಾಣಪ್ಪ.—ಆರ್.ಇ.ಸಿ. ಮಂಜೂರಾತಿ ಯಾವಾಗ ಸಿಗುತ್ತದೆ ? ಕಳೆದ ಸಲ ಇದೇ ಉತ್ತರ ಹೇಳಿದ್ದಾರೆ.

ಅಧ್ಯಕ್ಷರು.—೯ ತಾಂಡಾಗಳಿಗೆ ವಿದ್ಯುತ್ ಪೂರೈಸಲಾಗಿದೆಯೆಂದು ಹೇಳಿದ್ದಾರೆ. ಉಳಿದ ೪೦ ತಾಂಡಾಗಳಿಗೆ ವಿದ್ಯುತ್ ಪೂರೈಸಲು ಆರ್.ಇ.ಸಿ. ಆರ್ಥಿಕ ನೆರವಿನ ಮಂಜೂರಾತಿಯನ್ನು ಯಾವಾಗ ಪಡೆದುಕೊಳ್ಳುತ್ತೀರಿ ಎಂದು ಪ್ರಶ್ನೆ ಕೇಳಿ. ಆದಷ್ಟು ಬೇಗ ಮಾಡಲು ಕೇಂದ್ರ ಸರ್ಕಾರಕ್ಕೆ ಬರೆಯಿರಿ ಎಂದು ಪ್ರಶ್ನೆ ಕೇಳಿ.

ಶ್ರೀ ಕೆ.ಬಿ. ಶಾಣಪ್ಪ.—ಗೈಡೆನೇ ಇಸವಿಯಲ್ಲಿ ಇದೇ ಉತ್ತರವನ್ನು ಹೇಳಿದ್ದಾರೆ. ಆರ್.ಇ.ಸಿ. ಮಂಜೂರಾತಿಗಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕುತ್ತೀರಾ ? ಈಗಾಗಲೇ ವಿದ್ಯುತ್ ಪೂರೈಸಿರತಕ್ಕ ೯ ತಾಂಡಾಗಳು ಯಾವುವು ?

ಶ್ರೀ ಜೆ.ಹೆಚ್. ಪಟೀಲ್.—ಆದಷ್ಟು ಬೇಗ ಮಂಜೂರಾತಿಯನ್ನು ತರಿಸುತ್ತೇನೆ.

ಶ್ರೀ ಕೆ.ಬಿ. ಶಾಣಪ್ಪ.—ಈಗಾಗಲೇ ನೀವು ವಿದ್ಯುತ್ ಪೂರೈಸಿರತಕ್ಕ ೯ ತಾಂಡಾಗಳು ಯಾವುವು?

ಶ್ರೀ ಜೆ.ಹೆಚ್. ಪಟೀಲ್.—ಆಮೇಲೆ ಉತ್ತರ ಕಳುಹಿಸಿಕೊಡುತ್ತೇನೆ.

ಆನೆಗಳ ಹತ್ಯೆ

೮೮ (೨೪೫) ಶ್ರೀಮತಿ ಮುಕ್ತರುನ್ನೀಸಾ (ನರಸಿಂಹರಾಜ).—ಮಾನ್ಯ ಅರಣ್ಯ ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ವಾಣಿಜ್ಯ ವ್ಯಾಪಾರದ ಉದ್ದೇಶಕ್ಕಾಗಿ ಅನಧಿಕೃತ ಪ್ರವೇಶಿಕರಿಂದ ದಂತಕ್ಕಾಗಿ ಆನೆಗಳ ಹತ್ಯೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ:—

೨. ಅರಣ್ಯದಲ್ಲಿ ಸರಿಯಾದ ಪರ್ಯಾವೇಷಣೆಯನ್ನು ಒದಗಿಸದೇ ಇರುವುದಕ್ಕೆ ಕಾರಣವೇನು ?

೩. ಅಂತಹ ಪ್ರಕರಣಗಳ ವಿಚಾರದಲ್ಲಿ ನಿರ್ಧಾರಣ ಅಂಶದ ಬಗ್ಗೆ ಮಾಹಿತಿ ಮಾಡಲಾಗಿದೆಯೇ?

೪. ಅಂತಹ ಆನೆ ಹತ್ಯೆಯನ್ನು ತಡೆಗಟ್ಟಲು ಏನಾದರು ಕ್ರಮ ಕೈಗೊಳ್ಳಲಾಗಿದೆಯೇ ಮತ್ತು ತಪ್ಪಿತಸ್ಥ ಅಧಿಕಾರಿಗಳ ಮೇಲೆ ಏನಾದರು ಕ್ರಮ ತೆಗೆದುಕೊಳ್ಳಲಾಗಿದೆಯೇ ?

೫. ಇದರಿಂದ ಆನೆಹತ್ಯೆ ಮತ್ತು ದಂತದ ವ್ಯಾಪಾರಕ್ಕೆ ಸರಾಗವಾದ ಮಾರ್ಗವಿಲ್ಲೆ

ಶ್ರೀ ಜೆ.ಎಸ್. ದೇಶ್‌ಮುಖ್ (ಅರಣ್ಯ ಹಾಗೂ ಭೂವಿಜ್ಞಾನ ಮಂತ್ರಿಗಳು).—

೧. ಹೌದು.